# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿಧಾನಸೌಧ ಮತ್ತು ವಿಕಾಸಸೌಧದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಇಲಾಖೆಗಳಿಗೆ ಸ್ಥಳಾವಕಾಶ ಒದಗಿಸುವ ಬಗ್ಗೆ

ಓದಲಾಗಿದೆ:

1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 321 ಡಿಬಿಎಂ 2006, ದಿನಾಂಕ: 15-2-2007
2) ಆರ್ಥಿಕ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಯವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ-356/ವೆಚ್ಚ-5/2007, ದಿನಾಂಕ: 27-2-2007
3) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಆಇ/151/ಸೇ-4/07, ದಿನಾಂಕ: 05-03-2007.
4) ಆರ್ಥಿಕ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿಯವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/151/ಸೇ-4/2007, ದಿನಾಂಕ: 12-03-2007
5) ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 253 ಡಿಬಿಎಂ 2006, ದಿನಾಂಕ: 15-03-2007
6) ಸರ್ಕಾರದ ಕಾರ್ಯದರ್ಶಿ(ಇ-ಆಡಳಿತ), ಸಿಆಸು ಇಲಾಖೆ (ಆಡಳಿತ ಸುಧಾರಣೆ) ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಡಿಪಿಎಆರ್ 18 ಇಜಿವಿ 2003(ಭಾ-1), ದಿನಾಂಕ: 04-12-2006, ದಿನಾಂಕ: 10-04-2007.

******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ: 15-02-2007ರ ಆದೇಶದಲ್ಲಿ ಬಹುಮಹಡಿ ಕಟ್ಟಡದ 5ನೇ ಹಂತದ 1ನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್ಥಿಕ ಇಲಾಖೆಯ ಸೇವೆಗಳು ವಿಭಾಗದ ಸರ್ಕಾರದ ಉಪಕಾರ್ಯದರ್ಶಿ-1, ಸರ್ಕಾರದ ಉಪಕಾರ್ಯದರ್ಶಿ-2, ಇಬ್ಬರು ಅಧೀನ ಕಾರ್ಯದರ್ಶಿಗಳು ಮತ್ತು 4 ಶಾಖೆಗಳಿಗೆ ವಿಕಾಸಸೌಧ ಕಟ್ಟಡದ ನೆಲಮಹಡಿಯ ಕೊಠಡಿ ಸಂಖ್ಯೆ: 11ನ್ನು ಹಂಚಿಕೆ ಮಾಡಲಾಗಿತ್ತು.

ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ: 27-02-2007ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯ ವೆಚ್ಚ-5 ಹಾಗೂ ಬಂಡವಾಳ ಹೂಡಿಕೆ ಶಾಖೆಗಳು ವಿಧಾನಸೌಧದ 2ನೇ ಮಹಡಿಯ ಕೊಠಡಿ ಸಂಖ್ಯೆ: 205ರಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಿಬ್ಬಂದಿಗಳಿಗೆ ಕುಳಿತುಕೊಳ್ಳಲು ಸಹ ಸ್ಥಳಾವಕಾಶವಿಲ್ಲದೇ ಇರುವುದರಿಂದ ಹೆಚ್ಚಿನ ಸ್ಥಳಾವಕಾಶವನ್ನು ಒದಗಿಸಲು ಕೋರಿರುತ್ತಾರೆ.

ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ: 15-03-2007ರ ಅಧಿಕೃತ ಜ್ಞಾಪನದಲ್ಲಿ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 102 ಡಿಬಿಎಂ 2006, ದಿನಾಂಕ: 11-07-2006 ರನ್ವಯ ಸಿಆಸು ಇಲಾಖೆಯ ರಾಜ್ಯ ಶಿಷ್ಟಾಚಾರ ವಿಭಾಗದ ಇಬ್ಬರು ಸರ್ಕಾರದ ಅಧೀನ ಕಾರ್ಯದರ್ಶಿಗಳಿಗೆ ವಿಧಾನಸೌಧದಲ್ಲಿ ಹಂಚಿಕೆ ಮಾಡಲಾಗಿದ್ದ ಕೊಠಡಿ ಸಂಖ್ಯೆ: 360ಎ ಯನ್ನು ರದ್ದುಪಡಿಸಲಾಗಿದೆ.

ಕ್ರಮ ಸಂಖ್ಯೆ (3) ಮತ್ತು (4)ರಲ್ಲಿ ಕ್ರಮವಾಗಿ ಓದಲಾದ ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಹಾಗೂ ಆರ್ಥಿಕ ಇಲಾಖೆಯ ಉಪ ಕಾರ್ಯದರ್ಶಿಯವರ ಅನಧಿಕೃತ ಟಿಪ್ಪಣಿಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 321 ಡಿಬಿಎಂ 2006, ದಿನಾಂಕ: 15-02-2007ರನ್ವಯ ಬಹುಮಹಡಿ ಕಟ್ಟಡದ 5ನೇ ಹಂತದ 1ನೇ ಮಹಡಿಯಲ್ಲಿರುವ ಆರ್ಥಿಕ ಇಲಾಖೆಯ ಸೇವೆಗಳು ಶಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ವಿಕಾಸಸೌಧದ ನೆಲಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 11ನ್ನು ಹಂಚಿಕೆ ಮಾಡಲಾಗಿದೆ. ಆರ್ಥಿಕ ಇಲಾಖೆಯ ಸೇವಾ ಶಾಖೆಗಳು ಅಭಿಪ್ರಾಯ ನೀಡುವುದರ ಜೊತೆಗೆ ಹಲವಾರು ನಿಯಮಗಳನ್ನು ರೂಪಿಸಿ ಪ್ರಕಟಿಸುತ್ತಿದೆ. ಇಂತಹ ಪ್ರಕಟಣೆಗಳ ಪ್ರತಿಗಳನ್ನು ಕಾಪಾಡಬೇಕಾಗಿದೆ. ಇವು ಅತ್ಯಾವಶ್ಯಕ ಹಾಗೂ ಅಗತ್ಯವಾದ ದಾಖಲೆಗಳಾಗಿದ್ದು, ಶಾಖೆಗಳಲ್ಲಿ ಉಳಿಸಿಕೊಳ್ಳುವುದು ಅನಿವಾರ್ಯ ಮತ್ತು ಅಗತ್ಯವಾಗಿದೆ. ಇವುಗಳನ್ನು 39 ಕಪಾಟುಗಳು ಮತ್ತು 13 ರ್‍ಯಾಕ್‌ಗಳಲ್ಲಿ ಸಂಗ್ರಹಿಸಿಡಲಾಗಿದೆ. ವಿಕಾಸಸೌಧದಲ್ಲಿ ಹೆಚ್ಚುವರಿ ಕಪಾಟುಗಳ ವ್ಯವಸ್ಥೆ ಇರುವುದಿಲ್ಲ. ಆದಕಾರಣ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 321 ಡಿಬಿಎಂ 2006, ದಿನಾಂಕ: 15-02-2007ರನ್ವಯ ಆರ್ಥಿಕ ಇಲಾಖೆಯ ಸೇವೆಗಳು ವಿಭಾಗವನ್ನು ವಿಕಾಸಸೌಧಕ್ಕೆ ಸ್ಥಳಾಂತರಿಸುವ ಆದೇಶವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಸರ್ಕಾರದ ಕಾರ್ಯದರ್ಶಿ(ಇ-ಆಡಳಿತ), ಸಿಆಸು ಇಲಾಖೆ(ಆಡಳಿತ ಸುಧಾರಣೆ) ಇವರು ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಅರೆ ಸರ್ಕಾರಿ ಪತ್ರದಲ್ಲಿ KSWAN ಯೋಜನೆಯಡಿ ಯಲ್ಲಿನ ರಾಜ್ಯ ನಿಯಂತ್ರಣ ಕೊಠಡಿಗಾಗಿ ವಿಕಾಸಸೌಧ ಕಟ್ಟಡದಲ್ಲಿ 2,000 ಚದರಡಿಗಳಷ್ಟು ಸ್ಥಳಾವಕಾಶವನ್ನು ಹಂಚಿಕೆ ಮಾಡಲು ಪ್ರಸ್ತಾಪಿಸಿ, ವಿಕಾಸಸೌಧ ನೆಲಮಹಡಿಯ ಕೊಠಡಿ ಸಂಖ್ಯೆ: 11ನ್ನು ರಾಜ್ಯ ನಿಯಂತ್ರಣ ಕೊಠಡಿಗಾಗಿ ಹಂಚಿಕೆ ಮಾಡಲು ಕೋರಿರುತ್ತಾರೆ.

ಮೇಲ್ಕಂಡ ಹಿನ್ನೆಲೆಯನ್ನು ರಿಶೀ ಈ ಕೆಳಕಂಡ ಆದೇಶ

<u>ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 5 ಡಿಬಿಎಂ 2007, ಬೆಂಗಳೂರು, ದಿನಾಂಕ: 24-4-2007</u>

ಸರ್ಕಾರಿ ಆದೇಶ ಸಂಖ್ಯೆ: 321 ಡಬಿಎಂ. 2006, ದಿನಾಂಕ: 15-02-2007ರನ್ವಯ ಬಹುಮಹಡಿ ಕಟ್ಟಡದ 5ನೇ ಹಂತದ 1ನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆರ್ಥಿಕ ಇಲಾಖೆಯ ಸೇವೆಗಳು ವಿಭಾಗದ ಸರ್ಕಾರದ ಉಪ ಕಾರ್ಯದರ್ಶಿ-1, ಸರ್ಕಾರದ ಉಪ ಕಾರ್ಯದರ್ಶಿ-2, ಇಬ್ಬರು ಅಧೀನ ಯ ಮತ್ತು 4 ಶಾಖೆಗಳಿಗೆ ವಿಕಾಸಸೌಧ ಕಟ್ಟಡದ ನೆಲಮಹಡಿಯ ಕೊಠಡಿ ಸಂಖ್ಯೆ 11ನ್ನು ಹಂಚಿಕೆ ಮಾಡಲಾಗಿದ್ದ ಆದೇಶವನ್ನು ರದ್ದುಪಡಿಸಿ ಬಹುಮಹಡಿ ಕಟ್ಟಡದ 5ನೇ ಹಂತದ 1ನೇ ಮಹಡಿಯಲ್ಲಿಯೇ ಅವರನ್ನು ಮುಂದುವರಿಸಲಾಗಿದೆ.

KSWAN ಯೋಜನೆಯಡಿಯಲ್ಲಿ ರಾಜ್ಯ ನಿಯಂತ್ರಣ ಕೊಠಡಿ ಸ್ಥಾಪಿಸುವ ಸಲುವಾಗಿ ವಿಕಾಸಸೌಧದ ನೆಲಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 11ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆವಿಗೆ ಸರ್ಕಾರದ ಕಾರ್ಯದರ್ಶಿ (ಇ-ಆಡಳಿತ) ಸಿಆಸುಇ (ಆಡಳಿತ ಸುಧಾರಣೆ) ಇವರಿಗೆ ಹಂಚಿಕೆ ಮಾಡಲಾಗಿದೆ.

ಸರ್ಕಾರಿ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 253 ಡಿಬಿಎಂ 2006, ದಿನಾಂಕ: 15-03-2007ರಲ್ಲಿ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ; ಸಿಆಸುಇ 102 ಡಿಬಿಎಂ 2006, ದಿನಾಂಕ: 11-07-2006ರನ್ವಯ ಸಿಆಸು ಇಲಾಖೆಯ ರಾಜ್ಯ ಶಿಷ್ಟಾಚಾರ ವಿಭಾಗದ ಇಬ್ಬರು

ಸರ್ಕಾರದ ಅಧೀನ ಕಾರ್ಯದರ್ಶಿಗಳಿಗೆ ವಿಧಾನಸೌಧದ 3ನೇ ಮಹಡಿಯಲ್ಲಿ ಹಂಚಿಕೆ ಮಾಡಲಾಗಿದ್ದ ಕೊಠಡಿ ಸಂಖ್ಯೆ: 360ಎ ಯನ್ನು ರದ್ದು ಮಾಡಲಾಗಿದ್ದು ಇದರಲ್ಲಿ ಒಂದು ಭಾಗವನ್ನು (ವುಡನ್ ಪಾರ್ಟಿಷನ್) ಮಾತ್ರ ಆರ್ಥಿಕ ಇಲಾಖೆಯ ವೆಚ್ಚ-5 ಶಾಖೆಗೆ ಸರ್ಕಾರದ ಮುಂದಿನ ಆದೇಶದವರೆವಿಗೆ ಹಂಚಿಕೆ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಎಸ್. ಮಂಜುನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಕಾರ್ಯಕಾರಿ)

ಗೆ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
3. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ I & II
4. ಸರ್ಕಾರದ ಕಾರ್ಯದರ್ಶಿ (ಇ-ಆಡಳಿತ), ಸಿಆಸು ಇಲಾಖೆ(ಆಡಳಿತ ಸುಧಾರಣೆ)
5. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
6. ಸರ್ಕಾರದ ಉಪಕಾರ್ಯದರ್ಶಿ(ಸೇವೆಗಳು) - I ಮತ್ತು II, ಆರ್ಥಿಕ ಇಲಾಖೆ, ಬಹುಮಹಡಿ ಕಟ್ಟಡ
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-5)
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ
10. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
11. ಸರ್ಕಾರದ ಕಾರ್ಯದರ್ಶಿ, ಸಿಆಸು ಇಲಾಖೆ, ಇವರ ಆಪ್ತ ಕಾರ್ಯದರ್ಶಿ,
12. ಮಾನ್ಯ ಉಪ ಮುಖ್ಯ ಮಂತ್ರಿಯವರ ಕಾರ್ಯದರ್ಶಿಗಳ ಆಪ್ತಕಾರ್ಯದರ್ಶಿ
13. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು
14. ಕಾರ್ಯಪಾಲಕ ಅಭಿಯಂತರರು, ನಂ.1, ಕಟ್ಟಡಗಳ ವಿಭಾಗ, ಲೋಕೋಪಯೋಗಿ ಇಲಾಖೆ, ಎಸ್.ಜೆ.ಪಿ. ಆವರಣ, ಬೆಂಗಳೂರು-1
15. ಸಹಾಯಕ ಕಾರ್ಯಪಾಲಕ ಅಭಿಯಂತರರು, ನ.2, ಕಟ್ಟಡಗಳ ಉಪ ವಿಭಾಗ, ವಿಧಾನಸೌಧ
16. ಸಹಾಯಕ ಕಾರ್ಯಪಾಲಕ ಅಭಿಯಂತರರು, ನ.3, ಕಟ್ಟಡಗಳ ಉಪ ವಿಭಾಗ, ಬಹುಮಹಡಿ ಕಟ್ಟಡ
17. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಕಾಸಸೌಧ ವಿಶೇಷ ಉಪವಿಭಾಗ ವಿಕಾಸಸೌಧ
18. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.5, ವಿದ್ಯುತ್ ಉಪ ವಿಭಾಗ, ವಿಧಾನಸೌಧ,
19. ವಿಶೇಷಾಧಿಕಾರಿ, ಸಿಆಸುಇ(ಕಾರ್ಯಕಾರಿ), ಬಹುಮಹಡಿ ಕಟ್ಟಡ.
20. ಸಹಾಯಕ ಭದ್ರತಾಧಿಕಾರಿ/ಹಿರಿಯ ಆರೋಗ್ಯ ಪರಿವೀಕ್ಷಕರು/ಮೇಲ್ವಿಚಾರಕರು, ಸಿಆಸುಇ (ಕಾರ್ಯಕಾರಿ), ಬಹುಮಹಡಿ ಕಟ್ಟಡ/ವಿಕಾಸಸೌಧ
21. ನಿವಾಸಿ ಅಧಿಕಾರಿ, ಮಾಹಿತಿ ಕೇಂದ್ರ, ವಿಧಾನಸೌಧ,
22. ಶಾಖಾ ರಕ್ಷಾ ಕಡತ
23. ಕಚೇರಿ ಪ್ರತಿ